ಬೆಂಗಳೂರಿಂ ಪಶ್ಚಿಮ ವಲಯದ ಆಹಾರ ಇಲಾಖೆಯಿಂ ವಲಯಾಧಿಕಾರಿಗಳಿಂದ ಕಿರುಕುಳ ಆಗುತ್ತಿರುವ ಬಗ್ಗೆ

೨೨೪. ಶ್ರೀ ಪಿ. ಸಿ ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಬೆಂಗಳೂರು ಪಶ್ಚಿಮ ವಲಯದ ವಲಯಾಧಿಕಾರಿಗಳು ಇವರ ವ್ಯಾಪ್ತಿಗೆ ಬರುವ ಪಡಿತರ ಅಂಗಡಿಗಳು ಆಹಾರ ಸರಬರಾಜು ನಿಗಮದ ಯೂನಿಟ್‌ಗಳು ಹಾಗೂ ಸಹಕಾರ ಸಂಘಗಳಿಗೆ ಭೇಟಿ ನೀಡಿ ಅನಗತ್ಯ ಕಿರುಕುಳ ನೀಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದರೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಯಾವುದೇ ವಿಧವಾದ ಲಿಖಿತವಾದ ದೂರುಗಳು ನ್ಯಾಯಬೆಲೆ ಅಂಗಡಿಗಳು, ಸೊಸೈಟಿಗಳು, ಆಹಾರ ನಿಗಮದ ಚಿಲ್ಲರೆ ಮಳಿಗೆಗಳ ವತಿಯಿಂದ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಅಲ್ಲಿಯ ಜನ ಲಿಖಿತ ಮೂಲಕ ದೂರು ಕೊಟ್ಟಿದ್ದಾರೆ. ಅಲ್ಲಿ ಸರಿಯಾಗಿ ಪಡಿತರ ವ್ಯವಸ್ಥೆ ನಡೆಯುತ್ತಿಲ್ಲ. ಮತ್ತು ಅಧಿಕಾರಿಗಳು ಸೊಸೈಟಿಗಳಿಗೆ ಕಿರುಕುಳ ಕೊಡುತ್ತಾರೆ ಎಂದು ಹೇಳಿದ್ದಾರೆ. ದಯವಿಟ್ಟು ಇನ್ನೊಂದು ಸಲ ವಿಚಾರಣೆ ಮಾಡಿ ಅಲ್ಲಿ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಸದಸ್ಯರ ಸಲಹೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಈ ದಿಸೆಯಲ್ಲಿ ನಾನು ಹೆಜ್ಜೆ ಇಡುತ್ತೇನೆ.

ಸರ್ಕಾರಿ ವಾಹನಗಳು ಪ್ರತಿ ತಿಂಗಳು ಬಳಸುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಬಗ್ಗೆ

೧೧೦. ಶ್ರೀ ಸಾದತ್ ಅಲಿ ಖಾನ್ (ಚಿನ್ನಪಟ್ಟಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿ ತಿಂಗಳಿನಲ್ಲಿ ಬಳಸಲಾಗುತ್ತಿರುವ ಒಟ್ಟು ಪೆಟ್ರೋಲ್ ಮತ್ತು ಡೀಸೆಲ್ ವಿವರ.

ಆ) ಸರ್ಕಾರಿ ವಾಹನಗಳು ಪ್ರತಿ ತಿಂಗಳಿನಲ್ಲಿ ಬಳಸಲಾಗುತ್ತಿರುವ ಒಟ್ಟು ಪೆಟ್ರೋಲ್ ಮತ್ತು ಡೀಸೆಲ್ ಎಷ್ಟು ? (ಇಲಾಖಾವಾರು ಮಾಹಿತಿಯನ್ನು ಒದಗಿಸುವುದು).

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಎ) ಪೆಟ್ರೋಲ್—ಪ್ರತಿ ತಿಂಗಳಿಗೆ ೧೮,೪೨೩-೬೬ ಮೆಟ್ರಿಕ್ ಟನ್‌ನಷ್ಟು ಬಳಸಲಾಗುತ್ತಿದೆ.
ಬಿ) ಡೀಸೆಲ್—ಪ್ರತಿ ತಿಂಗಳಿಗೆ ೮೮,೦೪೪-೬ ಮೆಟ್ರಿಕ್ ಟನ್‌ನಷ್ಟು ಬಳಸಲಾಗುತ್ತಿದೆ.

ಆ) ಮಾಹಿತಿಯನ್ನು ಎಲ್ಲಾ ಸರ್ಕಾರಿ ಇಲಾಖೆಗಳಿಂದ ಸಂಗ್ರಹಿಸಲಾಗುತ್ತಿದೆ.

ಶ್ರೀ ಸಾದತ್ ಅಲಿ ಖಾನ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೇವಲ ಒಂದು ಇನ್‌ಫರ್ಮೇಷನ್ ಮಾತ್ರ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಪ್ರತಿ ತಿಂಗಳು ೧೮,೪೨೩.೬೬ ಮೆಟ್ರಿಕ್ ಟನ್‌ನಷ್ಟು ಪೆಟ್ರೋಲ್.೮೮,೦೪೪.೬ ಮೆಟ್ರಿಕ್‌ಟನ್‌ನಷ್ಟು ಡೀಸೆಲ್ ಬಳಕೆಯಾಗುತ್ತಿದೆ ಎಂದು ಕೊಟ್ಟಿದ್ದಾರೆ.ಅದರೆ ಡಿಪಾರ್ಟ್‌ಮೆಂಟ್‌ವೈಸ್ ಇನ್‌ಫರ್ಮೇಷನ್ ಕೇಳಿದ್ದೆ. ಅದನ್ನು ಕೊಡಲಿಲ್ಲ. ಇದರಲ್ಲಿ ಸ್ಟೇಟ್ ಗೌರ್ನಮೆಂಟ್‌ನವರು ಎಷ್ಟು ಕನ್‌ಸ್ಯೂಮ್ ಮಾಡುತ್ತಿದ್ದಾರೆ ಎನ್ನುವಷ್ಟಕ್ಕಾದರೂ ಇನ್‌ಫರ್ಮೇಷನ್‌ನನ್ನು ಪೂರ್ತಿಯಾಗಿ ಕೊಡಲಿಲ್ಲ. ಎಷ್ಟು ಪರ್ಸೆಂಟೇಜ್ ಡೀಸೆಲ್ ಮತ್ತು ಪೆಟ್ರೋಲ್‌ನ್ನು ಗೌರ್ನಮೆಂಟ್ ಡಿಪಾರ್ಟ್‌ಮೆಂಟ್ಸ್ ಕನ್‌ಸ್ಯೂಮ್ ಮಾಡುತ್ತದೆ ಎಂಬ ಇನ್‌ಫರ್ಮೇಷನ್ ಸಹ ಕೊಡಲಿಲ್ಲ. ಈ ಇನ್‌ಫರ್ಮೇಷನ್ ಕೊಡಬೇಕೆಂದು ಮಿನಿಸ್ಟರ್‌ಗೆ ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಈ ಮಾಹಿತಿಯನ್ನು ಸಂಗ್ರಹಿಸುತ್ತಿದ್ದೇವೆ. ಈ ಮಾಹಿತಿ ನನಗೆ ಸಿಕ್ಕ ತಕ್ಷಣ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಾದತ್ ಅಲಿ ಖಾನ್.—ನನಗೆ ಗೊತ್ತಿರುವ ಇನ್‌ಫರ್ಮೇಷನ್ ಪ್ರಕಾರ ಳ೦ ಪರ್ಸೆಂಟ್ ಡೀಸೆಲ್, ಪೆಟ್ರೋಲ್‌ನ್ನು ಡಿಪಾರ್ಟ್‌ಮೆಂಟ್ಸ್ ಯೂಸ್ ಮಾಡುತ್ತಿದೆ. ಗೌರ್ನಮೆಂಟ್ ಡಿಪಾರ್ಟ್‌ಮೆಂಟ್ಸ್‌ನಲ್ಲಿ ಇಷ್ಟೊಂದು ಬಳಕೆಯಾಗುತ್ತಿರುವುದನ್ನು ಕಡಿಮೆ ಮಾಡುವುದಕ್ಕೆ ಸರಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ ? Has the government taken any action to reduce the consumption of petrol and diesel ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಈ ಬಗ್ಗೆ ಈಗಾಗಲೇ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಡೀಸೆಲ್ ಮತ್ತು ಪೆಟ್ರೋಲ್ ಬಳಕೆಯಲ್ಲಿ ಮಿತವ್ಯಯ ಮಾಡಬೇಕೆಂಬ ದೃಷ್ಟಿಯಿಂದ ಒಂದು ಸಮಿತಿಯನ್ನು ಮಾಡಲಾಗಿದೆ. ಅವರು ಒಂದೆಲ್ಲ ಅನೇಕಬಾರಿ ಸಭೆ ನೇರಿ ಚರ್ಚೆ ಮಾಡಿದ್ದಾರೆ. ಮಿತವ್ಯಯದ ಹಾದಿಯನ್ನು ಹಿಡಿಯುವಂತಹ ಪ್ರಯತ್ನ ಮಾಡಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ.

ಪ್ರೊ. ಎಂ ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಹಾಗೆ ನಾನು ಎರಡು ಅಧಿವೇಶನದಲ್ಲೂ ನಾನು ಒಂದು ಪ್ರಶ್ನೆಯನ್ನು ಕೇಳುಹಿಸಿದ್ದೆ. ನನಗೆ ಗೊತ್ತಿರುವ ಹಾಗೆ ಶ್ರೀಮಾನ್ ಬಾಬಾಗೌಡ ಪಾಟೀಲರು ಮೊದಲ ಅಧಿವೇಶನದಲ್ಲಿ ಈ ಪ್ರಶ್ನೆ ಕೇಳಿದ್ದರು. ಪ್ರಶ್ನೆ ಏನೆಂದರೆ, ಸರ್ಕಾರಿ ಸ್ವಾಮ್ಯದಲ್ಲಿರುವಂತಹ ಕಾರುಗಳ ಸಂಖ್ಯೆ ಎಷ್ಟು ? ಜೀಪ್‌ಗಳ ಸಂಖ್ಯೆ ಎಷ್ಟು ? ಖಾಸಗಿ ಬಳಕೆಗಾಗಿ ಸರಕಾರಿ ವಾಹನವನ್ನು ನಮ್ಮ ಸರಕಾರಿ ನೌಕರರು ಉಪಯೋಗಿಸಿದರೆ ನಿಮ್ಮ ಫೈನಾನ್ಷಿಯಲ್ ಕೋಡ್ ಪ್ರಕಾರ ಯಾವ ದರದಲ್ಲಿ ಅವರು ಹಣ ಪಾವತಿ ಮಾಡಬೇಕು ? ಖಾಸಗಿ ಉಪಯೋಗದ ಕಾರಣದಿಂದ ಕಳೆದ ಸಾಲಿನಲ್ಲಿ ಎಷ್ಟು ಹಣ ಪಾವತಿ ಮಾಡಿದ್ದಾರೆ ? ಇದಕ್ಕೆ ಉತ್ತರ ಬರಲಿಲ್ಲ. ಮೂರು ಅಧಿವೇಶನದಿಂದ ಉತ್ತರ ಬರಲಿಲ್ಲ ಸರಕಾರ ಎಷ್ಟು ಬಳಕೆ ಮಾಡಿದೆ ? ಈ ವರ್ಷದ್ದು ನಿಮಗೆ ಗೊತ್ತಿಲ್ಲದಿದ್ದರೂ ಹೋದ ವರ್ಷದ ಮಾಹಿತಿ ಇರಬೇಕಲ್ಲ ? ಅದನ್ನಾದರೂ ದಯವಿಟ್ಟು ತಿಳಿಸಿ. ಮಾನ್ಯ ಸದಸ್ಯರು ಸರ್ಕಾರದವರು ಇದರಲ್ಲಿ ಳ೦ ಪರ್ಸೆಂಟ್ ಪೆಟ್ರೋಲ್ ಮತ್ತು ಡೀಸೆಲ್ ಬಳಸುತ್ತಾರೆ ಎಂದು ಹೇಳಿದರು. ಆದರಲ್ಲಿ ಸುಮಾರು 75% of petrol and diesel is consumed for private purposes. The whole people of Karnataka know about it. ಇದರ ವಿವರವನ್ನು ಅಧಿಕೃತವಾಗಿ ದಯವಿಟ್ಟು ಒದಗಿಸುತ್ತೀರಾ ಎಂದು ಈಗ ಕೇಳುತ್ತಿದ್ದೇನೆ.

೧೧–೩೦ ಎ. ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ವಲಯದಲ್ಲಿ ಎಷ್ಟು ವಾಹನಗಳು ಇವೆ ಎನ್ನುವುದನ್ನು ಡಿ.ಪಿ.ಎ.ಆರ್ ಸೆಕ್ಷನ್‌ನವರು ಸಮಗ್ರವಾಗಿ ಮಾಹಿತಿಯನ್ನು ಕಲೆಕ್ಟ್ ಮಾಡಬೇಕಾಗುತ್ತದೆ ಆದರೆ ನಮ್ಮ ಸರ್ಕಾರದ ನೀತಿ ಏನಿದೆ, ಅಂದರೆ ಅನಾವಶ್ಯಕವಾಗಿ ವಾಹನಗಳನ್ನು ಉಪಯೋಗಿಸುವುದು ಮತ್ತು ಅನಾವಶ್ಯಕವಾಗಿ ವಾಹನಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಉಪಯೋಗಿಸುವ ಕ್ರಮ ಏನಿದೆ, ಅದನ್ನು ತಡೆಗಟ್ಟಲೇ ಬೇಕೆಂಬ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ್ದನ್ನು ತಾವು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರಿ ;

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಪ್ರಶ್ನೆ ಕೇಳಿದವರು ಅವರು. ಅವರೆ ಸುಮ್ಮನೆ ಇದ್ದಾರೆ. ಅವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. ಅವರಿಗೆ ಸಮಾಧಾನವಾಗಿದೆ. ನೀವೇತಕ್ಕೆ ಮಧ್ಯೆ ಬರುತ್ತೀರಿ ?

(ಗೊಂದಲ)

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರಿಗೆ ನಾನು ಹೇಳುತ್ತೇನೆ. ನನಗೆ ಸಮಾಧಾನವಾಗಿಲ್ಲ. ಏಕೆಂದರೆ ದಿನ ಬೆಳಗಾದರೆ ನಾವು ನೀವು ನೋಡುತ್ತಿದ್ದೇವೆ. ಸರ್ಕಾರಿ ವಾಹನ ಕಾನ್ವೆಂಟ್ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗಿಬಿಡುವುದರಿಂದ ಹಿಡಿದು ಮತ್ತೆ ಸಾಯಂಕಾಲ ಕ್ಲಬ್‌ಗಳಿಗೆ ಹೋಗುವವರೆಗೂ ಸರ್ಕಾರದ ವಾಹನ ಉಪಯೋಗವಾಗುತ್ತಿದೆ.

ಇದರ ಮಾಹಿತಿಯನ್ನು ತರಿಸಿಕೊಡುವ ಯೋಗ್ಯತೆ ಯಾವುದೇ ಸರ್ಕಾರಕ್ಕೂ ಇನ್ನೂ ಬಂದಿಲ್ಲ. ದಯವಿಟ್ಟು ನಿಮಗೆ ಏನಾದರು ಜವಾಬ್ದಾರಿ ಇದ್ದರೆ ಆ ಮಾಹಿತಿಯನ್ನು ಇದೇ ಅಧಿವೇಶನದಲ್ಲಿ ತರಿಸಿಕೊಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ —ನಾನು ಈಗ ಅಧಿಕಾರ ವಹಿಸಿಕೊಂಡಿದ್ದೇನೆ. ಈಗತಾನೇ ಬಿಸಿ ಬಿಸಿ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನಾನು ಇಷ್ಟು ಭರವಸೆ ಕೊಡುತ್ತೇನೆ. ಈ ಅಧಿವೇಶನ ಮುಗಿಯುವುದರೊಳಗಾಗಿ.....

ಶ್ರೀ ಮಾಟಾಳ್ ನಾಗರಾಜ್.—ಸುದ್ದಿ ತಣ್ಣಗಾದ ಮೇಲೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾವು ಯಾವಾಗಲೂ ತಣ್ಣಗೇ ಇರುತ್ತೇವೆ ಬಹಳ ಪ್ರಮುಖವಾದ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಉತ್ತರವನ್ನು ಈ ಅಧಿವೇಶನ ಮುಗಿಯುವುದರೊಳಗೆ ಕಳುಹಿಸಿಕೊಡಲು ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ಮಾಟಾಳ್ ನಾಗರಾಜ್.—ಅಷ್ಟರಲ್ಲಿ ನಿಮ್ಮ ಇಲಾಖೆ ಬದಲಾವಣೆಯಾದರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಹೋದ ಅಧಿವೇಶನದಲ್ಲಿ ಇವರು ನಮಗೆ ಬಹಳ ಭರವಸೆಗಳನ್ನು ಕೊಟ್ಟಿದ್ದರು. ಈಗ ಕೇಳೋಣ ಎಂದರೆ ಅವರಿಗೆ ಆ ಖಾತೆಯೇ ಇಲ್ಲ ಅದಕ್ಕೆ ನಮಗೆ ತೊಂದರೆ ಆಗಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸರ್ಕಾರ ಇದೆಯಲ್ಲ :

ಅಧ್ಯಕ್ಷರು.—ಸರ್ಕಾರ ನಿಂತರವಾಗಿ ನಡೆಯುತಕ್ಕಂಥಾದ್ದು. ಅವರು ಕೊಟ್ಟ ಭರವಸೆಗಳಿಗೆ ಅವರು ಕೊರಳು ಕೊಡಬೇಕಾಗುತ್ತದೆ, ಮತ್ತೆ ಪ್ರೊ. ನಂಜುಂಡಸ್ವಾಮಿಯವರು ರೈಜ್ ಮಾಡಿರತಕ್ಕಂಥ ಪ್ರಶ್ನೆ ಏನೆಂದರೆ ಅಧಿಕಾರಿಗಳು ಖಾಸಗಿ ಕೆಲಸಗಳಿಗೆ ಸರ್ಕಾರಿ ವಾಹನಗಳನ್ನು ಒಳಸಿ ಕೊಂಡರೆ ಪೈನಾನ್ಷಿಯಲ್ ಕೋಡ್‌ನಲ್ಲಿ ಇರುವಂತೆ, ಅಷ್ಟು ಹಣವನ್ನು ಅವರು ಸರ್ಕಾರಕ್ಕೆ ಅಧಿಕಾರಿಗಳು ತುಂಬಿ ಕೊಡಬೇಕು ಎಂದು, ಆ ಮಾಹಿತಿ ಕಳೆದ ವರ್ಷ ಅಥವಾ ಅದರ ಹಿಂದಿನ ವರ್ಷ ಈ ರೀತಿ ಎಷ್ಟು ಜನ ಅಧಿಕಾರಿಗಳು ಎಷ್ಟು ಹಣ ಸರ್ಕಾರಕ್ಕೆ ತುಂಬಿಕೊಟ್ಟಿದ್ದಾರೆಂಬ ದಾಖಲೆಗಳು ನಿಮಗೆ ಸಿಗಬೇಕು.

SRI T. N. NARASIMHAMURTHY.—I have already promised. I will make honest efforts to see that the information is collected and place it on the table of the House.

ಅಧ್ಯಕ್ಷರು.—ಆಗಬಹುದು. ೪೯ (೨೩೫) ಸಂಖ್ಯೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಇದನ್ನು ಮುಂದಿನವಾರ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ಕೆ. ಎಚ್. ಹನುಮೇಗೌಡರ ಪರವಾಗಿ ಅವರ ಪ್ರಶ್ನೆಯನ್ನು ಶ್ರೀ ಜಿ. ಎಸ್. ಆಚಾರ್‌ರವರು ಕೇಳಬಹುದು.

ಹಾಸನದಲ್ಲಿ ೨೦೦ ಹಾಸಿಗೆಯ ಆಸ್ಪತ್ರೆ ನಿರ್ಮಾಣದ ಬಗ್ಗೆ

೧೯೮. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಪಟ್ಟಣದ ಜಿಲ್ಲಾ ಆಸ್ಪತ್ರೆಯನ್ನು ಯಾವಾಗ ಮತ್ತು ಎಷ್ಟು ಜನ ರೋಗಿಗಳ ಅನುಕೂಲಕ್ಕಾಗಿ ಕಟ್ಟಲಾಯಿತು ?

ಆ) ಈ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಬರುವ ಬಡ ರೋಗಿಗಳಿಗೆ ಬೆಡ್‌ಗಳಿಲ್ಲದೆ ವರಾಂಡದಲ್ಲಿ ಮತ್ತು ವಾರ್ಡ್‌ಗಳ ಬೆಡ್‌ಗಳ ಮಧ್ಯದಲ್ಲೂ ಬೆಡ್‌ಗಳನ್ನು ಹಾಕಿ ರೋಗಿಗಳಿಗೆ ಅವಕಾಶ ಕಲ್ಪಿಸಬೇಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿ ದಿನೇ ದಿನೇ ಹೆಚ್ಚುತ್ತಿರುವ ಬಡರೋಗಿಗಳ ಅನುಕೂಲಕ್ಕಾಗಿ ೨೦೦ ಹಾಸಿಗೆಯ ಒಂದು ವಾರ್ಡನ್ನು ಕಟ್ಟಲು ಕಳೆದ ಹತ್ತು ವರ್ಷಗಳಿಂದ ಸರ್ಕಾರಕ್ಕೆ ಒತ್ತಾಯ ಬರುತ್ತಿರುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?